ದಿನಾಂಕ : 10.06.2024
ಅಸಲು ದಾವೆ: 58/2019
ಡಿ.ಡಬ್ಲ್ಯೂ: 2

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : ವಾದಿ ಪರ ವಕೀಲರಾದ ಶ್ರೀ ಎನ್.ಪಿ. ರವರಿಂದ :**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂಬುದು ನಿಮಗೆ ಓದು ಬರಹ ಬರದ ಕಾರಣ ಗೊತ್ತಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರಕ್ಕೆ ನೀವು ಹೆಬ್ಬೆಟ್ಟಿನ ಗುರುತು ಹಾಕಿರುವುದನ್ನು ಬಿಟ್ಟರೆ ನಿಮಗೆ ಬೇರೇನು ಗೊತ್ತಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ದಿನಾಂಕ 03.04.2014 ರಂದು ಹೊಸಕೆರೆ ಸಿದ್ದಲಿಂಗಯ್ಯ ಮತ್ತು ಅವರ ಕುಟುಂಬದವರಿಂದ ನಾನು ದಾವಾ ಆಸ್ತಿಯನ್ನು ಖರೀದಿಸಿರುತ್ತೇನೆ ಎಂದರೆ ಸರಿ. ಸದರಿ ಕ್ರಯಪತ್ರದ ಆಧಾರದ ಮೇಲೆ ನನಗೆ ಖಾತೆ ಆಗಿ ಆರ್.ಟಿ.ಸಿ ಸಹಾ ಬಂದಿರುತ್ತದೆ ಎಂದರೆ ಸರಿ. ಕುಟುಂಬದ ಎಲ್ಲಾ ವ್ಯವಹಾರವನ್ನು ಯಾರು ಮಾಡುತ್ತಾರೆ ಎಂದರೆ ಸಾಕ್ಷಿ ನಾನೇ ಮಾಡುತ್ತೇನೆ ಎಂದು ಉತ್ತರಿಸುತ್ತಾರೆ. ಕುಟುಂಬದ ಆಗು ಹೋಗು ಹಾಗೂ ಎಲ್ಲಾ ವ್ಯವಹಾರಗಳು ನಿಮ್ಮದೇ ಎಂದರೆ ಸಾಕ್ಷಿ ಮಗ ಮತ್ತು ನನ್ನದು ಎಂದು ಉತ್ತರಿಸುತ್ತಾರೆ.

2016 ನೇ ಇಸವಿಯಲ್ಲಿ ಒಂದು ಟ್ರ್ಯಾಕ್ಟರ್ ಖರೀದಿ ಮಾಡಿದ್ದೆವು ಎಂದರೆ ಸರಿ. ದಾವಾ ಆಸ್ತಿಯನ್ನು ಬಿಟ್ಟರೆ ನಮಗೆ ಬೇರೆ ಯಾವುದೇ ಆಸ್ತಿ ಇಲ್ಲ ಎಂದರೆ ಸರಿ. ಸದರಿ ದಾವಾ ಆಸ್ತಿಯನ್ನು ಹೊರತುಪಡಿಸಿ ನಿಮಗೆ ಬೇರೆ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸಾಕ್ಷಿ ನನ್ನ ಹಿರಿಯ ಮಗ ದುಡಿಯುತ್ತಾನೆ ಎಂದು ಉತ್ತರಿಸುತ್ತಾರೆ. ನನ್ನ ಕಿರಿಯ ಮಗನ ಹೆಸರ ಪ್ರದೀಪ್. ಇನ್ನೊಬ್ಬ ಮಗನ ಹೆಸರು ಪ್ರತಾಪ್. ಪ್ರತಾಪ್ ಬೆಂಗಳೂರಿನಲ್ಲಿ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಾನೆ. ಬ್ಯಾಂಕಿನ ಹೆಸರು ನನಗೆ ಗೊತ್ತಿಲ್ಲ ಹೋಂ ಲೋನ್ ಕೊಡುವ ಬ್ಯಾಂಕ್ ಆಗಿರುತ್ತದೆ. ಹಿರಿಯ ಮಗ ಎಷ್ಟು ವರ್ಷಗಳಿಂದ ಕೆಲಸಕ್ಕೆ ಹೋಗುತ್ತಿದ್ದಾನೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಹಿರಿಯ ಮಗ ಕೆಲಸಕ್ಕೆ ಹೋಗುತ್ತಿರುವ ಬಗ್ಗೆ ದಾಖಲಾತಿಗಳನ್ನು

ನ್ಯಾಯಾಲಯದಲ್ಲಿ ಹಾಜರು ಪಡಿಸಲು ತೊಂದರೆ ಏನು ಇಲ್ಲ ಎಂದರೆ ಸಾಕ್ಷಿ ಮನೆಯಲ್ಲಿ ದಾಖಲಾತಿಗಳು ಇವೆ, ಆದರೆ ನನಗೆ ಓದಲು ಬರುವುದಿಲ್ಲವಾದ ಕಾರಣ ಹಾಜರು ಪಡಿಸಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ.

ನನ್ನ ಕಿರಿಯ ಮಗ ವ್ಯವಸಾಯ, ಎಳನೀರು ವ್ಯಾಪಾರ ಮತ್ತು ಇತರೆ ಹಳ್ಳಿಯ ಎಲ್ಲಾ ಕೆಲಸಗಳನ್ನು ಮಾಡುತ್ತಾನೆ. ಈ ಬಾಬ್ತು ಯಾವುದೇ ದಾಖಲಾತಿಗಳು ಇರುವುದಿಲ್ಲ. 2016 ರಲ್ಲಿ ಟ್ರ್ಯಾಕ್ಟರ್ ಖರೀದಿಸಲು ನಿಮಗೆ ಆದಾಯದ ಮೂಲ ಇರಲಿಲ್ಲ ಎಂದರೆ ಸಾಕ್ಷಿ ಲೋನ್ ಮಾಡಿ ತೆಗೆದುಕೊಂಡಿದ್ದೇವೆ ಎಂದು ಉತ್ತರಿಸುತ್ತಾರೆ. ಎಷ್ಟು ಸಾಲ ಮಂಜೂರಾಯಿತು ಎಂದರೆ ಸಾಕ್ಷಿ ಅದೆಲ್ಲಾ ನನಗೆ ಗೊತ್ತಾಗುವುದಿಲ್ಲ, ಒಟ್ಟು 4 ಲಕ್ಷ ಕಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. 2016 ರಲ್ಲೇ 4 ಲಕ್ಷ ಕಟ್ಟಿದ್ದೀರಾ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. 2016 ರಲ್ಲಿ ನಿಮಗೆ ಯಾವುದೇ ಆದಾಯದ ಮೂಲ ಇರಲಿಲ್ಲ ಹಾಗಾಗಿ ನಿಮ್ಮ ಕಿರಿಯ ಮಗನಿಗೆ ವ್ಯವಸಾಯದ ಉದ್ದೇಶಕ್ಕಾಗಿ ಟ್ರ್ಯಾಕ್ಟರ್ ಖರೀದಿಸಿಕೊಡುವ ಉದ್ದೇಶದಿಂದ ದಾವಾ ಸ್ವತ್ತನ್ನು ವಾದಿ ಪಿ.ಗೋಪಿನಾಥ್ ರವರಿಗೆ ರೂ.6 ಲಕ್ಷಗಳಿಗೆ ಮಾರಾಟ ಮಾಡಲು ಒಪ್ಪಿ ಅವರಿಂದ ರೂ.3 ಲಕ್ಷಗಳನ್ನು ಮುಂಗಡವಾಗಿ ಪಡೆದು ಕರಾರು ಮಾಡಿಕೊಟ್ಟಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅದೇ ರೀತಿ 3 ವರ್ಷಗಳ ಒಳಗೆ ಅವಶ್ಯಕ ದಾಖಲಾತಿಗಳನ್ನು ಸರಿಪಡಿಸಿಕೊಂಡು ಬಾಕಿ 3 ಲಕ್ಷಗಳನ್ನು ಪಡೆದು ಕ್ರಯ ಪತ್ರ ನೊಂದಣಿ ಮಾಡಿಕೊಡುವುದಾಗಿ ಒಪ್ಪಿಕೊಂಡಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಈ ದಾವೆ ದಾಖಲಿಸುವ ಪೂರ್ವದಲ್ಲಿ ತಮ್ಮ ವಕೀಲರ ಮೂಲಕ ನಿಮಗೆ ನೋಟೀಸ್ ಕಳುಹಿಸಿ ಕರಾರಿನ ಪ್ರಕಾರ ಬಾಕಿ ಕ್ರಯದ ಮೊತ್ತ ಕೊಟ್ಟು ಕ್ರಯ ಪತ್ರ ನೋಂದಣಿ ಮಾಡಿಸಿಕೊಳ್ಳಲು ತಯಾರಿದ್ದೇನೆ, ಹಾಗಾಗಿ ಕ್ರಯ ಪತ್ರ ನೊಂದಣಿ ಮಾಡಿಸಿಕೊಡಿ ಎಂದು ಸೂಚಿಸಿ ಕಳುಹಿಸಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿ.5 ರಲ್ಲಿರುವ ಹೆಬ್ಬೆಟ್ಟಿನ ಗುರುತು ನಿಮ್ಮದು ಎಂದರೆ ಸಾಕ್ಷಿ ಅಲ್ಲ ಎಂದು ಉತ್ತರಿಸುತ್ತಾರೆ. ಹಾಗೆಯೇ ನಿಪಿ.6 ರಲ್ಲಿ ಇರುವ ಸಹಿ ನಿಮ್ಮ ಮಗನ ಸಹಿ ಎಂದರೆ ಸಾಕ್ಷಿ ಅಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಡಿ.2 ನ್ನು ತೋರಿಸಿ ನಿಡಿ.2 ಇ, ನಿಡಿ.2 ಎಫ್ ನಿಮ್ಮ ಮಗನ ಸಹಿ ಎಂದರೆ ಸಾಕ್ಷಿ ನನಗೆ ಗೊತ್ತಾಗುವುದಿಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಡಿ.1 ನ್ನು ತೋರಿಸಿ ಅದರಲ್ಲಿ ಇರುವ ಹೆಬ್ಬೆಟ್ಟಿನ ಗುರುತು ಯಾರದು ಎಂದು ಸೂಚಿಸಿದಾಗ ಸಾಕ್ಷಿ ಸದರಿ ಹೆಬ್ಬೆಟ್ಟಿನ ಗುರುತನ್ನು ನೋಡಿ ನನ್ನದು ಎಂದು ಉತ್ತರಿಸುತ್ತಾರೆ. ಸದರಿ ಹೆಬ್ಬೆಟ್ಟಿನ ಗುರುತನ್ನು ನಿಡಿ.1 ಎ ಎಂದು ಗುರುತಿಸಲಾಯಿತು. ವಾದಿ

ಈ ದಾವಾ ದಾಖಲಿಸುವ ಪೂರ್ವದಲ್ಲಿ ವಕೀಲರ ಮೂಲಕ ಕಳುಹಿಸಿದ ನೋಟೀಸ್ ನಿಮಗೆ ಜಾರಿಯಾಗಿದ್ದು, ಆದರೂ ನೀವು ಯಾವುದೇ ಉತ್ತರ ಕೊಟ್ಟಿಲ್ಲ ಎಂದರೆ ಸಾಕ್ಷಿ ನಾವು ತೆಗೆದುಕೊಂಡಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮಗನೇನಾದರೂ ಈ ರೀತಿ ನೋಟೀಸ್ ಬಂದಿತ್ತು ನಾವು ಅದಕ್ಕೆ ಯಾವುದೇ ಉತ್ತರ ಕೊಟ್ಟಿಲ್ಲ ಎಂದು ನಿಮಗೆ ಏನಾದರೂ ತಿಳಿಸಿದ್ದರಾ ಎಂದರೆ ಸಾಕ್ಷಿ ನನಗೇನು ಹೇಳಿಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ನ್ಯಾಯಾಲಯದಿಂದ ನೋಟೀಸ್ ಏನಾದರೂ ಬಂದಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದಿಂದ ಯಾವುದಾದರೂ ನೋಟೀಸ್ ಬಂದ ಬಗ್ಗೆ ನೀವೇನಾದರೂ ಸಹಿ ಮಾಡಿ ತೆಗೆದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನ್ಯಾಯಾಲಯದಿಂದ ನೋಟೀಸ್ ಬಂದಿತ್ತು ಎಂದು ನಿಮ್ಮ ಮಗ ಏನಾದರೂ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮಗೆ ನ್ಯಾಯಾಲಯದಿಂದ ಯಾವುದೂ ನೋಟೀಸ್ ಬಂದಿಲ್ಲ ಹಾಗೆಯೇ ನಿಮ್ಮ ಮಗನಿಗೆ ನ್ಯಾಯಾಲಯದಿಂದ ನೋಟೀಸ್ ಬಂದ ಬಗ್ಗೆಯೂ ನಿಮಗೆ ತಿಳಿಸಿಲ್ಲ ಹಾಗಾದರೆ ಇದೇ ಮೊದಲ ಬಾರಿ ನೀವು ನ್ಯಾಯಾಲಯದ ಮುಂದೆ ಬಂದು ಪ್ರಮಾಣ ಪತ್ರ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಈ ಪ್ರಮಾಣ ಪತ್ರ ಹೊರತು ಪಡಿಸಿ ನೀವು ನ್ಯಾಯಾಲಯಕ್ಕೆ ಯಾವುದೇ ತಕರಾರು ಸಲ್ಲಿಸಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಯಾವುದೇ ತಕರಾರಿಗೆ ಸಂಬಂಧಪಟ್ಟಂತೆ ನೀವು ಎಂದೂ ರುಜು ಮಾಡಿಲ್ಲ ಎಂದರೆ ಸಾಕ್ಷಿ ಇಲ್ಲ ನನ್ನ ಮಗ ಇಲ್ಲದೆ ನಾನು ಯಾವುದೂ ಮಾಡುವುದಿಲ್ಲ ಎಂದು ಉತ್ತರಿಸುತ್ತಾರೆ. ಪ್ರಮಾಣ ಪತ್ರದಲ್ಲಿ ಹಾಕಿರುವ ಹೆಬ್ಬೆಟ್ಟಿನ ಗುರುತು ಹೊರತುಪಡಿಸಿ ನೀವು ಯಾವುದೇ ಪ್ರತಿವಾದ ಪತ್ರಕ್ಕಾಗಲೀ ದಾಖಲಾತಿಗಾಗಲೀ ಹೆಬ್ಬೆಟ್ಟಿನ ಗುರುತು ಅಥವಾ ರುಜು ಹಾಕಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ತಕರಾರಿಗೆ ಸಂಬಂಧಪಟ್ಟಂತೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನೀವು ಯಾವುದೇ ತಕರಾರಿಗೆ ಹೇಳಿಕೆ ಕೊಡದೆ ಇರುವ ಕಾರಣ ಈ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂಬುದು ನಿಮಗೇನು ಗೊತ್ತಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಈ ದಿನ ನನನ್ನು ನನ್ನ ಮಗ ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿರುತ್ತಾನೆ. ನೀವು ನ್ಯಾಯಾಲಯಕ್ಕೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ಹೆಬ್ಬೆಟ್ಟಿನ ಗುರುತು ಎಲ್ಲಿ ಮಾಡಿದಿರಿ ಎಂದರೆ ಸಾಕ್ಷಿ ನಾನು ಎಲ್ಲೂ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಈ ದಿನ ನ್ಯಾಯಾಲಯದಲ್ಲಿ ಹೇಳಿಕೆ ಕೊಡಬೇಕು ಎಂದು ನಿಮ್ಮ ಮಗ ಕರೆದುಕೊಂಡು ಬಂದರಾ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ.

ನಿಮ್ಮ ಗಂಡ ಪಿ.ಗೋಪಿನಾಥ್ ರವರ ಜಮೀನಿನಲ್ಲಿ ಕೆಲಸಕ್ಕೆ ಹೋಗುತ್ತಿದ್ದರಾ ಎಂದು ಎಲ್ಲಾದರೂ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಪುನಃ ಮುಂದುವರೆದು ಬರೆಸಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡ ಗೋಪಿನಾಥ್ ರವರ ಬಳಿ ತೋಟದ ಕೆಲಸಕ್ಕೆ ಹೋಗುತ್ತಿದ್ದ ಬಾಬ್ತು ರೂ.5,000/- ಸಂಬಳ ಕೊಡುತ್ತಿದ್ದರು ಎಂದು ದಾಖಲಾತಿ ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಗಂಡ ಹಾಗೂ ಗೋಪಿನಾಥ್ ರವರ ನಡುವೆ ವಿವಾದ ಉಂಟಾಗಿ ವೈಷಮ್ಯ ಉಂಟಾಯಿತು ಎಂದು ಎಲ್ಲದರೂ ಹೇಳಿ ಬರೆಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಮಗ ಬೆಂಗಳೂರಿನ ಕಂಪನಿಗೆ ಕೆಲಸಕ್ಕೆ ಹೋಗುತ್ತಿದ್ದು ಅವನಿಗೆ ರೂ.30,000/- ಸಂಬಳ ಬರುತ್ತದೆ ಎಂದು ನೀವು ಎಲ್ಲಾದರೂ ಹೇಳಿದ್ದೀರಾ ಎಂದರೆ ಸಾಕ್ಷಿ ನಾನು ಎಲ್ಲೂ ಹೇಳಿಲ್ಲ ಬರೆದಿರಬೇಕಷ್ಟೆ ಎಂದು ಉತ್ತರಿಸುತ್ತಾರೆ. ನಿಮ್ಮ ಮಗ ಬೆಂಗಳೂರಿನಲ್ಲಿ ಕೆಲಸಕ್ಕೆ ಹೋಗಿ ರೂ.30,000/- ಸಂಬಳ ಬರುತ್ತಿರುವ ಬಗ್ಗೆ ದಾಖಲೆ ಏನಾದರೂ ನೋಡಿದ್ದೀರಾ ಎಂದರೆ ಸಾಕ್ಷಿ ಮನೆಯಲ್ಲಿ ಇವೆ ನನಗೆ ಸಂಬಳ ತಂದು ಕೊಡುತ್ತಾನೆ ಎಂದು ಉತ್ತರಿಸುತ್ತಾರೆ. ನನ್ನ ಮಗ ಸಂಬಳ ತಂದು ಕೊಡುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 15.06.2016 ರಂದು ನೀವು ಮತ್ತು ನಿಮ್ಮ ಮಗ ದಾವಾ ಅನುಸೂಚಿ ಸ್ವತ್ತಿನ ಬಾಬ್ತು ಕರಾರು ಮಾಡಿಕೊಟ್ಟಿದ್ದೀರಿ ಈಗ ಹೇಗಾದರೂ ಆ ಸ್ವತ್ತನ್ನು ಲಪಾಟಾಯಿಸಬೇಕು ಎಂಬ ದುರುದ್ದೇಶದಿಂದ ನಿಮ್ಮ ಮಗ ಹೇಳಿಕೊಟ್ಟಂತೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

ನಿಪಿ.7 ರಲ್ಲಿ ನೀವು ನಿಪಿ.7 ಎ ರಂತೆ ಹೆಬ್ಬೆಟ್ಟಿನ ಗುರುತು ಹಾಕಿದ್ದೀರಿ ಹಾಗೆಯೇ ನಿಮ್ಮ ಮಗ ನಿಪಿ.7 ಬಿ ರಂತೆ ಸಹಿ ಹಾಕಿದ್ದಾರೆ ಎಂದರೆ ಸಾಕ್ಷಿ ನನ್ನ ಮಗನದು ನನಗೆ ಗೊತ್ತಾಗುವುದಿಲ್ಲ ನಿಪಿ.7 ಎ ಹೆಬ್ಬೆಟ್ಟಿನ ಗುರುತು ನನ್ನದಲ್ಲ ಎಂದು ಉತ್ತರಿಸುತ್ತಾರೆ. ನಿಪಿ7 ಕ್ಕೆ ನೀವು ಸಾಕ್ಷಿದಾರರುಗಳ ಸಹಿಗಳನ್ನು ಹಾಕಿಸಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಜಮೀನನ್ನು ವಾದಿ ಗೋಪಿನಾಥ್ ರವರಿಗೆ ಬರೆದುಕೊಡಬೇಕಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಅವರ ವಕೀಲರ ಮೂಲಕ ಸಲ್ಲಿಸಿರುವ ವಕಾಲತ್ ನಾಮೆಯಲ್ಲಿರುವ ಹೆಬ್ಬೆಟ್ಟಿನ ಗುರುತು ತೋರಿಸಿ ಇದು ನಿಮ್ಮ ಹೆಬ್ಬೆಟ್ಟಿನ ಗುರುತಾಗಿದೆ ಎಂದು ಸೂಚಿಸಿದ ಪ್ರಶ್ನೆಗೆ

ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ನಿಪಿ.7 ಕ್ಕೆ ನಿಪಿ.7 ಎ ರಂತೆ ನೀವು ಹೆಬ್ಬೆಟ್ಟಿನ ಗುರುತು ಹಾಕಿದ್ದರೂ ಸಹಾ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.